# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 975

2) ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 24-07-2024

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಜಿಲ್ಲೆಗಳಲ್ಲಿ ಎಷ್ಟು ಮೀನುಗಾರಿಕೆ ಬಂದರುಗಳಿವೆ; ಇದರ ನಿರ್ವಹಣೆಯನ್ನು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರಾವಳಿ ಜಿಲ್ಲೆಗಳಲ್ಲಿ ಆಧಿಸೂಚಿತ ಒಟ್ಟು 09 ಮೀನುಗಾರಿಕೆ ಬಂದರುಗಳಿವೆ. ವಿವರ ಕೆಳಕಂಡಂತಿದೆ:- (see table below) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 92 ಮೀಇಇ 2015, ದಿನಾಂಕ: 19-06-2015 ರ ಮೀನುಗಾರಿಕೆ ಬಂದರುಗಳು ಮತ್ತು ಇಳಿದಾಣ ಕೇಂದ್ರಗಳ ಸಮಗ್ರ ನಿರ್ವಹಣಾ ನೀತಿಯನ್ವಯ ಬಂದರುಗಳ ಪ್ರವೇಶ, ವಾರ್ಫೇಜ್, ಲ್ಯಾಂಡಿಂಗ್ ಮತ್ತು ಭರ್ತಿಂಗ್ ಶುಲ್ಕ ವಸೂಲಾತಿ ಹೊಣೆಯನ್ನು ಮತ್ತು ಬಂದರಿನ ಸ್ವಚ್ಛತೆ ಮತ್ತು ಇತರೆ ನಿರ್ವಹಣೆಯನ್ನು ಸಮಗ್ರವಾಗಿ ನಿರ್ವಹಿಸಲು ಟೆಂಡರ್/ಹರಾಜು ಮೂಲಕ ಗುತ್ತಿಗೆಗೆ ನೀಡಿ ಬಂದರುಗಳ ಸಮಗ್ರ ನಿರ್ವಹಣೆಯನ್ನು ಮಾಡಲಾಗುತ್ತಿದೆ ಹಾಗೂ ಬಂದರುಗಳಲ್ಲಿ ಅಗತ್ಯವಿರುವ ಹೊಸ ಕಾಮಗಾರಿ ಮತ್ತು ದುರಸ್ಥಿ ಕಾಮಗ್ಹಾರಿಗಳನ್ನು ಕೈಗೊಳ್ಳಲು ಸ್ಥಳೀಯ ಮೀನುಗಾರಿಕೆ ಅಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಅಗತ್ಯತೆಗೆ ಮತ್ತು ಅನುದಾನದ ಲಭ್ಯತೆಯ ಅನುಗುಣವಾಗಿ ಕರ್ನಾಟಕ ಜಲಸಾರಿಗೆ ಮಂಡಳಿ ಇವರ ಮುಖಾಂತರ ಕೈಗೊಳ್ಳಲಾಗುತ್ತಿದೆ. |
| ಆ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ನಿರ್ಮಾಣ ಗೊಂಡಿದ್ದ ಮೀನುಗಾರಿಕೆ ಬಂದರು ಕುಸಿದು ಬಿದ್ದಿರುವ ಬಗ್ಗೆ, ಕೈಗೊಂಡ ಕ್ರಮಗಳೇನು; | ದಕ್ಷಿಣ ಕನ್ನಡ ಜಿಲ್ಲೆಯ ಕುಳಾಯಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮೀನುಗಾರಿಕೆ ಬಂದರು ಕಾಮಗಾರಿಯ ನಿರ್ವಹಣೆಗಾಗಿ ಕೈಗೊಂಡಿರುವ ಕ್ರಮಗಳ ಕುರಿತು ವರದಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

| ಕ್ರ. ಸಂ | ಜಿಲ್ಲೆ | ಬಂದರು |
|---|---|---|
| 1 | ದಕ್ಷಿಣ ಕನ್ನಡ | ಮಂಗಳೂರು ಬಂದರು |
| 2 | ಉಡುಪಿ | ಮಲ್ಪೆ ಬಂದರು |
| 3 | | ಗಂಗೊಳ್ಳಿ ಬಂದರು |
| 4 | ಉತ್ತರ ಕನ್ನಡ | ಹೊನ್ನಾವರ ಬಂದರು |
| 5 | | ತದಡಿ ಬಂದರು |
| 6 | | ಕಾರವಾರ (ಬೈತಖೋಲ) ಬಂದರು |
| 7 | | ಭಟ್ಕಳ (ಮಾವಿನಕುರ್ವೆ) ಬಂದರು |
| 8 | | ಆಮದಳ್ಳಿ ಬಂದರು |
| 9 | | ಬೇಲೀಕೇರಿ ಬಂದರು |

| | | |
|---|---|---|
| ಇ) | ಕರಾವಳಿ ಮೀನುಗಾರಿಕೆ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣ ಎಷ್ಟು; ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಹಣವನ್ನು ಉಪಯೋಗಿಸಲಾಗುವುದು; (ವಿವರ ನೀಡುವುದು) | ಕರಾವಳಿ ಮೀನುಗಾರಿಕೆ ಅಭಿವೃದ್ಧಿಗಾಗಿ 2024-25 ನೇ ಸಾಲಿನಲ್ಲಿ ಒಟ್ಟು ರೂ.8712.00 ಲಕ್ಷಗಳ ಅನುದಾನವನ್ನು ಮೀಸಲಿಡಲಾಗಿದೆ. ಯೋಜನೆವಾರು ವಿವರ ಕೆಳಕಂಡಂತ್ತಿದೆ.<br>1) ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆ: ರೂ.400.00 ಲಕ್ಷ.<br>2) ಉಳಿತಾಯ ಮತ್ತು ಪರಿಹಾರ ಯೋಜನೆ: ರೂ. 912.00 ಲಕ್ಷ.<br>3) ನಾಡದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಯೋಜನೆ: ರೂ.3000.00 ಲಕ್ಷ.<br>4) ಮೀನುಗಾರಿಕೆ ಇಳಿದಾಣ ಮತ್ತು ತಂಗುದಾಣಗಳು ನಿರ್ಮಾಣ ಯೋಜನೆ: ರೂ. 1000.00 ಲಕ್ಷ.<br>5) ಸಂಕಷ್ಟ ಪರಿಹಾರ ನಿಧಿ: 400.00 ಲಕ್ಷ.<br>6) ಕೇಂದ್ರ ಪುರಸ್ಕೃತ ಯೋಜನೆ (ಕೇಂದ್ರದ ಮತ್ತು ರಾಜ್ಯದ ಪಾಲು ಸೇರಿ): ಬಂದರುಗಳ ನಿರ್ಮಾಣ ಯೋಜನೆ: ರೂ. 3000.00 ಲಕ್ಷ |
| ಈ) | ಕರಾವಳಿಯಲ್ಲಿ ಮೀನುಗಾರರಿಗೆ ನೀಡುವ ಸೀಮೆಎಣ್ಣೆಯನ್ನು ಏರಿಸ ಬೇಕೆಂಬ ಬೇಡಿಕೆ ಇದ್ದು; ಇದರ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮವೇನು; ಪ್ರಸ್ತುತ ಸೀಮೆಎಣ್ಣೆಯ ವಿತರಣೆಗಾಗಿ ವಾರ್ಷಿಕವಾಗಿ ಎಷ್ಟು ಖರ್ಚು ಮಾಡ ಲಾಗುವುದು?<br>(ವಿವರ ನೀಡುವುದು) | ಕರಾವಳಿಯಲ್ಲಿ ಪ್ರತಿ ನಾಡದೋಣಿ ಮೀನುಗಾರರಿಗೆ ಮಾಸಿಕ 300 ಲೀಟರ್ ಸೀಮೆಎಣ್ಣೆ ನೀಡಲು ಅವಕಾಶವಿರುತ್ತದೆ. ಪ್ರಸ್ತುತ ಕೈಗಾರಿಕೆ ಸೀಮೆಎಣ್ಣೆಯನ್ನು ರಿಯಾಯತಿ ದರದಲ್ಲಿ ವಿತರಿಸಲಾಗುತ್ತಿದೆ. ಸೀಮೆಎಣ್ಣೆ ವಿತರಣೆ ಪ್ರಮಾಣವನ್ನು ಏರಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. 2024-25 ನೇ ಸಾಲಿನಲ್ಲಿ ಸೀಮೆಎಣ್ಣೆ ವಿತರಣೆಗಾಗಿ ವಾರ್ಷಿಕವಾಗಿ ರೂ.3000.00 ಲಕ್ಷಗಳ ಅನುದಾನ ಒದಗಿಸಲಾಗಿದೆ. |

ಸಂಖ್ಯೆ: ಪಸಂಮೀ ಇ-149 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವಾನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **782(975) ರ**

**ಅನುಬಂಧ-1**

ದಕ್ಷಿಣ ಕನ್ನಡ ಜಿಲ್ಲೆಯ ಕುಳಾಯಿಯಲ್ಲಿ ರೂ. 196.51 ಕೋಟಿ ಅಂದಾಜು ವೆಚ್ಚದಲ್ಲಿ ಮಿನಿಸ್ಟ್ರೀ ಆಫ್ ಶಿಪ್ಪಿಂಗ್, ಕೇಂದ್ರ ಸರ್ಕಾರ ಇವರಿಂದ ಶೇಕಡ 50, ನವಮಂಗಳೂರು ಬಂದರು ಪ್ರಾಧಿಕಾರ (ಎನ್.ಎಂ.ಪಿ.ಎ), ಮಂಗಳೂರು ಇವರಿಂದ ಶೇಕಡ 45 ಮತ್ತು ರಾಜ್ಯ ಸರ್ಕಾರದಿಂದ ಶೇಕಡ 5 ರ ಅನುಪಾತದ ಅನುದಾನದ ಪಾಲಿನೊಂದಿಗೆ ಎನ್.ಎಂ.ಪಿ.ಎ, ಮಂಗಳೂರು ಮೂಲಕ ಮೀನುಗಾರಿಕೆ ಬಂದರು ನಿರ್ಮಿಸಲು ಕೇಂದ್ರ ಸರ್ಕಾರವು ಪತ್ರ ಸಂಖ್ಯೆ: 33013/1993-ಎಫ್‌ವೈ (ಹೆಚ್), ದಿನಾಂಕ: 23.03.2018 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಸದರಿ ಬಂದರು ನಿರ್ಮಾಣ ಕಾಮಗಾರಿಯಲ್ಲಿ ಉತ್ತರದ ಬ್ರೇಕ್‌ವಾಟರ್ 831 ಮೀಟರ್, ದಕ್ಷಿಣದ ಬ್ರೇಕ್‌ವಾಟರ್ 262 ಮೀಟರ್, ಬರ್ತಿಂಗ್ ಜೆಟ್ಟಿ ನಿರ್ಮಾಣ, ಹೂಳೆತ್ತುವಿಕೆ, ಸ್ಲೋಪಿಂಗ್ ಹಾರ್ಡ್, ಬೀಚ್ ಲ್ಯಾಂಡಿಂಗ್, ಹರಾಜು ಮಳಿಗೆ, ರೇಡಿಯೋ ಕಮ್ಯೂನಿಕೇಷನ್ ಟವರ್ ನಿರ್ಮಾಣ, ಅಡ್ಮಿನ್ ಕಛೇರಿ, ದೋಣಿ ಮತ್ತು ಬಲೆ ರಿಪೇರಿ ಶೆಡ್, ಇ.ಟಿ.ಪಿ ನಿರ್ಮಾಣ , ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಒಳಗೊಂಡಿರುತ್ತದೆ.

ಸದರಿ ಕಾಮಗಾರಿಗೆ ಪರಿಸರ ಇಲಾಖೆಯಿಂದ Environment Clearnace No. SEIAA 19 IND 2014, Dated: 21.10.2016 ರಲ್ಲಿ ಪರಿಸರ ನಿರಾಕ್ಷೇಪಣಾ ಪತ್ರ (Environmental Clearance) ಮತ್ತು CRZ Clearance No: FEE/124/CRZ/2016, Date: 11.08.2016 ರಲ್ಲಿ ಕರಾವಳಿ ನಿಯಂತ್ರಣ ವಲಯ ನಿರಾಕ್ಷೇಪಣಾ ಪತ್ರ (CRZ Clearance) ಪಡೆಯಲಾಗಿರುತ್ತದೆ.

ಅದರಂತೆ, ಎನ್.ಎಂ.ಪಿ.ಎ ರವರು ಕುಳಾಯಿ ಬಂದರು ನಿರ್ಮಾಣ ಯೋಜನೆಯ ಅನುಷ್ಠಾನ ಸಂಸ್ಥೆಯಾಗಿದ್ದು, ಸದರಿಯವರು ಕುಳಾಯಿ ಬಂದರು ನಿರ್ಮಾಣ ಕಾಮಗಾರಿಯ ಟೆಂಡರ್ ಅನ್ನು ಮೆ: ಎಸ್‌ಎಪಿಎಲ್ ಜಿಸಿಸಿ ಜೆವಿ ಸಂಸ್ಥೆಗೆ ರೂ.147.00ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲು ನೀಡಿರುತ್ತಾರೆ.

ಪ್ರಸ್ತುತ ದಕ್ಷಿಣದ ಬ್ರೇಕ್‌ವಾಟರ್‌ನ (262 ಮೀಟರ್) ಕಾಮಗಾರಿ ಪೂರ್ಣಗೊಂಡಿದ್ದು, ಸದರಿ 262 ಮೀಟರ್ ಉದ್ದದ ದಕ್ಷಿಣದ ಬ್ರೇಕ್‌ವಾಟರ್‌ಗೆ ಪೂರ್ಣಪ್ರಮಾಣದಲ್ಲಿ ರಕ್ಷಣಾ ತಡೆಗೋಡೆ ಹಾಕಿ ರಕ್ಷಿಸಲಾಗಿರುತ್ತದೆ. ಉತ್ತರದ ಒಟ್ಟು 831ಮೀಟರ್ ನಲ್ಲಿ 510ಮೀಟರ್ ಬ್ರೇಕ್‌ವಾಟರ್ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿರುತ್ತದೆ. ಆದರೆ, 510 ಮೀಟರ್ ಬ್ರೇಕ್‌ವಾಟರ್ ಉದ್ದಲ್ಲಿ 300ಮೀಟರ್ ವರೆಗೆ ರಕ್ಷಣಾ ತಡೆಗೋಡೆ ಹಾಕಿ ರಕ್ಷಿಸಲಾಗಿದೆ. ಆದರೆ, ಬಾಕಿ ಉಳಿದ 210ಮೀಟರ್ ಉದ್ದದ ಬ್ರೇಕ್‌ವಾಟರ್ ಕಾಮಗಾರಿಗೆ ರಕ್ಷಣಾ ತಡೆಗೋಡೆ ಹಾಕಿರದ ಕಾರಣ ಮುಂಗಾರು ಸಮಯದಲ್ಲಿ ಸಮುದ್ರದ ಪ್ರಕ್ಷುಬ್ಧತೆಯಿಂದಾಗಿ ಉತ್ತರದ ಬ್ರೇಕ್‌ವಾಟರ್ ನಿರ್ಮಾಣಕ್ಕಾಗಿ ಸಮುದ್ರಕ್ಕೆ ಹಾಕಲಾದ ಕಲ್ಲುಗಳು ಕೊಚ್ಚಿಕೊಂಡು ಹೋಗುತ್ತಿದ್ದು, ಸದರಿ ವಿಷಯವಾಗಿ ಈಗಾಗಲೇ ಎನ್.ಎಂ.ಪಿ.ಎ. ಅಧಿಕಾರಿಯವರು ಬ್ರೇಕ್‌ವಾಟರ್ ಕಾಮಗಾರಿಯ ಸ್ಥಳ ಪರಿಶೀಲನೆ ಕೈಗೊಂಡು, ಕೊಚ್ಚಿಹೋಗಿರುವ ಭಾಗದ ಬ್ರೇಕ್‌ವಾಟರ್ ಕಾಮಗಾರಿಯನ್ನು ಕಾಮಗಾರಿಯ ಅನುಮೋದಿತ ವಿನ್ಯಾಸದಂತೆಯೇ ಟೆಂಡರ್‌ದಾರರು ಅವರ ಸ್ವಂತ ಖರ್ಚಿನಲ್ಲೇ ಮರು ನಿರ್ಮಾಣ ಮಾಡುವುದಾಗಿ ತಿಳಿಸಿರುತ್ತಾರೆ ಹಾಗೂ ಸದರಿ ಗುತ್ತಿಗೆದಾರರಿಗೆ ಉತ್ತರದ 300 ಮೀಟರ್ ಉದ್ದದ ಬ್ರೇಕ್‌ವಾಟರ್ ನಿರ್ಮಾಣ ಕಾಮಗಾರಿಗೆ ಮಾತ್ರ ಹಣ ಪಾವತಿಸಿರುವುದಾಗಿ ತಿಳಿಸಿರುತ್ತಾರೆ ಹಾಗೆಯೇ ಈ ಕುರಿತು NITK, ಸುರತ್ಕಲ್ ಇವರಿಂದ ತಪಾಸಣೆ ಕೈಗೊಂಡು ವರದಿಯನ್ನು ಸಹ ಸಲ್ಲಿಸಿರುತ್ತಾರೆ.

***